ದಿನಾಂಕ:23.01.2026ರಂದು ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ: ಶ್ರೀ. ಎಂ.ಹೆಚ್.ಕೆ., ವಕೀಲರಿಂದ ಅರ್ಜಿದಾರರ 1(ಎ)ಯಿಂದ 1(ಡಿ) ಪರವಾಗಿ:

ನಾನು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯದಿಂದ ಕೂಡಿರುತ್ತದೆ ಮತ್ತು ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ನನಗೆ ತಿಳಿದಿರುತ್ತದೆ.

2. ಮೂಲ 1ನೇ ಅರ್ಜಿದಾರ ನಾರಾಯಣ ನನ್ನ ಹೆಂಡತಿಯ ಅಣ್ಣ. ಅವರು ಈಗ ಮರಣ ಹೊಂದಿರುತ್ತಾರೆ. ಅರ್ಜಿದಾರ ಸಂಖ್ಯೆ.1(ಎ)ಯಿಂದ 1(ಡಿ) ಅವರ ಹೆಂಡತಿ ಮತ್ತು ಮಕ್ಕಳಾಗಿದ್ದು, ಅವರನ್ನು ಪ್ರತಿನಿಧಿಸುವ ಸಲುವಾಗಿ ನನಗೆ ಈ ಅರ್ಜಿಯಲ್ಲಿ ವಿಶೇಷ ಮುಕ್ತ್ಯಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಸದರಿ ಮುಕ್ತ್ಯಾರು ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು ಗುರುತಿಸಲಾಯಿತು.

**(ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.